

# ಸಾಹಿತ್ಯ ಉತ್ಸವಗಳು: ಉಳಿಯುವುದು ಏನು?

## ನಾಂದಿನುಡಿ

ಸಾಹಿತ್ಯ ಸಮ್ಮೇಳನಗಳು, ಸಂಭ್ರಮಗಳು ಕರ್ನಾಟಕದಲ್ಲಿ ಈಗಿತ್ತಲಾಗಿ ಅಲ್ಲಲ್ಲಿ ಆಗುತ್ತಲೇ ಇರುತ್ತವೆ. ಜನರು ದೈನಿಕದ ಜಂಜಡದಿಂದ ಕೊಂಚ ಬಿಡುವು ಪಡೆದು ಅವುಗಳಲ್ಲಿ ಭಾಗವಹಿಸುತ್ತಾರೆ. ಕಿವಿತುಂಬ, ಕಣ್ಣಗಲಕ್ಕೆ ಆ ಉತ್ಸವಗಳನ್ನು ತುಂಬಿಕೊಂಡು ಮನೆಗೆ ಮರಳುತ್ತಾರೆ. ಮುಂದಿನ ವರ್ಷ ಮತ್ತೆ ಅದೇ ಉತ್ಸಾಹ ಗರಿಗೆದರುತ್ತದೆ. ಇವೆಲ್ಲ ನಾಡಿನಲ್ಲಿ ಮಳೆ ಬೆಳೆಯಾಗದಿದ್ದರೂ ಕಾಲಕಾಲಕ್ಕೆ ನಡೆಯುತ್ತ ಆಸಕ್ತರನ್ನು ಪುಳಕಿತರನ್ನಾಗಿ, ರೋಮಾಂಚಿತರನ್ನಾಗಿ ಮಾಡುತ್ತಿರುತ್ತವೆ. ಈ ಸಾಲು ಸಾಲು ಮೇಳಗಳ ಕೊನೆಗೆ ಉಳಿಯುವುದು ಏನು, ಆದದ್ದು ಏನು? ಸಾಹಿತ್ಯದ ಕುರಿತ ಪ್ರೀತಿಯಲ್ಲಿ ಹೆಚ್ಚಳವೇ? ನಾಡು–ನುಡಿಯ ಕುರಿತು ಉಳಿಯುವ ಪ್ರಶ್ನೆಗಳೇ, ಅಭಿಮಾನವೇ? ಇದೆಲ್ಲದರ ಅರ್ಥ ಏನು? ಕನ್ನಡಿಗರು ಕೇಳಿಕೊಂಡಾಗ ಸ್ವತಃ ಅವರೇ ಪೆಚ್ಚಾಗಬಹುದು, ಎಲ್ಲವೂ ವ್ಯರ್ಥವಾಯಿತಲ್ಲ ಎಂದು ಬೇಸರಗೊಳ್ಳಲೂ ಬಹುದು.

ಊರ ಜಾತ್ರೆಗೆ ಹೋಗಿ ಬಂದಂತಲ್ಲ ಈ ಸಂಭ್ರಮ, ಸಮ್ಮೇಳನಗಳಿಗೆ ಹೋಗಿಬರುವುದು. ಇತ್ತೀಚೆಗೆ ಸಾಹಿತ್ಯದ ಗುತ್ತಿಗೆದಾರರೇ ತುಂಬಿರುವ, ಅವರೇ ನಡೆಸುವ ಮತ್ತು ಲಾಭದಾಯಕ ವಾರ್ಷಿಕ ಉದ್ಯಮವೂ ಆಗಿರುವ ಇವುಗಳಿಂದ ಕನ್ನಡಿಗರಿಗೆ ಕಿಂಚಿತ್ ಭಾವನಾತ್ಮಕ ನೆಲೆಯಲ್ಲಾದರೂ ಸಾಹಿತ್ಯ– ಭಾಷೆಯ ಕುರಿತಂತೆ ಪ್ರೇರಣೆಗಳು ಸಿಗಬೇಕು. ಜನರಲ್ಲಿ ಏನಾದರೂ ಕೆಲಸಗಳನ್ನು ಮಾಡುವ ಪ್ರಚೋದನೆಯನ್ನು, ಹುಮ್ಮಸ್ಸನ್ನು ಹುಟ್ಟಿಸಬೇಕಾಗುತ್ತದೆ. ಇಲ್ಲದಿದ್ದರೆ ಜೈಕಾರ ಹಾಕುತ್ತ ತಾಯಿ ಭುವನೇಶ್ವರಿ ದೇವಿಯ ನುಡಿರಥದ ಹಿಂದೆ ಪ್ರತಿ ವರ್ಷ ಸಾಗುತ್ತಲೇ ಇದ್ದರೆ ಅದೊಂದು ಕಾಟಾಚಾರದ ಸಂಪ್ರದಾಯವಾಗಿ ಉಳಿಯುತ್ತದೆ. ಅದರಿಂದ ಅಪಾರ ಪ್ರಮಾಣದ ಶ್ರಮ, ಶಕ್ತಿ, ಹಣ ವ್ಯರ್ಥವಾಗುತ್ತ ಇರುತ್ತದೆ.

ಜನರ ಹಣದಿಂದ ಜನರನ್ನು ಹೆಚ್ಚಾಗಿ ಒಳಗೊಳ್ಳದೆ ನಡೆಯುವ ಈ ಮೇಳಗಳು ಜನರ ದೃಷ್ಟಿಯಿಂದ ನೋಡಿದಾಗ ಕೊಂಚ ಹಾಸ್ಯಾಸ್ಪದವಾಗಿ ಕಾಣುವ ಸಾಧ್ಯತೆ ಇದೆ. ದೈನಿಕದ ಕಷ್ಟ, ಜಂಜಾಟದಲ್ಲಿ ಮುಳುಗಿರುವ ಜನರಿಗೆ ಇವೆಲ್ಲ ಕೆಲಸಕ್ಕೆ ಬಾರದ, ಲೌಕಿಕವಾಗಿ ಅಷ್ಟೇನೂ ಉಪಯುಕ್ತವಲ್ಲದ ನಿರರ್ಥಕ ಕ್ರಿಯೆಗಳಾಗಿ ಕಾಣಬಹುದು. ಮತ್ತು ಅವರಿಗೆ ಈ ಸಾಹಿತ್ಯೋಪಜೀವಿಗಳು ಮಾಡುವ ಹೆಣಗಾಟ, ಭೀಕರ ಭಾಷಣಗಳು, ಸಂವಾದಗಳು ನಗುವನ್ನೂ – ಬೇಸರವನ್ನೂ ಏಕಕಾಲದಲ್ಲಿ ತರುವ ಸಾಧ್ಯತೆ ಇದೆ. ಈ ಹಿಂದೆ ಕುವೆಂಪು, ಬೇಂದ್ರೆ, ಮಾಸ್ತಿ, ಅನಕೃ ಮತ್ತಿತರ ಸಾಹಿತಿಗಳ ಭಾಗವಹಿಸುವಿಕೆಯಿಂದ ಈ ಮೇಳಗಳಲ್ಲಿ ಆಗುತ್ತಿದ್ದ ಕನ್ನಡ ಭಾಷೆ, ಸಾಹಿತ್ಯದ ಕುರಿತಾಗಿನ ಜಾದೂ ಮಾಯವಾಗಿದೆ. ತಮ್ಮ ಕೃತಿ – ಮಾತುಗಳಿಂದ ಜನರಲ್ಲಿ ಆ ಧೀಮಂತರು ಮೂಡಿಸುತ್ತಿದ್ದ ಭಾಷೆ – ಸಾಹಿತ್ಯದ ಬಗೆಗಿನ ಆಸಕ್ತಿ ಸಹ. ಆ ರೀತಿಯಲ್ಲಿ ಕನ್ನಡ ರಸಿಕರನ್ನು ಸೆಳೆಯಬಲ್ಲ ಸಾಹಿತಿಗಳೂ ಕಡಿಮೆಯಾಗಿದ್ದಾರೆ. ಸಾಹಿತ್ಯದ ಪುಢಾರಿಗಿರಿಯೇ ಕಣ್ಣುಕೋರೈಸಿದರೆ ಅಸಲು ಸಾಹಿತ್ಯ – ಸಾಹಿತಿಗಳು ಮುಂಚೂಣಿಗೆ ಬರುವುದಾದರೂ ಹೇಗೆ?

ಈ ಮೇಳಗಳ ಕುರಿತಂತೆ ನಾಡಿನ ಚಿಂತನಶೀಲರು ವ್ಯಕ್ತಪಡಿಸಿದ ಪ್ರತಿಕ್ರಿಯೆಗಳು ಈ ಸಂಚಿಕೆಯಲ್ಲಿವೆ. 'ಸಾಹಿತ್ಯ ಉತ್ಸವಗಳ ಸುತ್ತ...' ಈ ಬಾರಿಯ 'ಮಯೂರ'ದ ವಿಶೇಷ.

● ಸಂದೀಪ ನಾಯಕ